ಸಾಕಷ್ಟು ನಷ್ಟ ಉಂಟಾಗುವಂತೆ ಅಧಿಕಾರಿಗಳು ನಡೆದುಕೊಂಡಿದ್ದಾರೆ. ಆದುದರಿಂದ ಅವರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳುವುದಕ್ಕೆ ತಾವು ಸದನ ಸಮಿತಿ ರಚಿಸುವುದರ ಮೂಲಕ ಅಥವಾ ಇದನ್ನು ಸಿ.ಓ.ಡಿ.ಗೆ ವಹಿಸಿಕೊಡಬೇಕೆಂದು ನಾನು ಸದನದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ನಿಯಮ 73ರ ಗಮನ ಸೆಳೆಯುವ ಸೂಚನೆಯೊಳಗೆ ಈ ಎಲ್ಲಾ ಅಂಶಗಳು ಅಡಕವಾಗಿಲ್ಲ. ಅನೇಕ ವಿಷಯಗಳನ್ನು ಇದರೊಳಗೆ ಸೇರಿಸಿ ಅವರು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವೆಲ್ಲವುಗಳೂ ಕೂಡ ಬಹಳ ಗುರುತರವಾಗಿರ ತಕ್ಕಂಥ ಅಪಾದನೆಗಳಾಗಿವೆ ಆಗಿರುವುದರಿಂದ ಇವುಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದಂಥ ರೀತಿಯಲ್ಲಿ ಒಂದು ನೋಟೀಸ್ ಕಳುಹಿಸಿದರೆ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಅವರು ಮೊದಲು ಪ್ರಸ್ತಾಪ ಮಾಡಿರುವ ವಿಷಯವೆಂದರೆ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ನಿವೇಶನಗಳ ಹಂಚಿಕೆಯಲ್ಲಿ ಆಗಿರುವಂಥ ಅವ್ಯವಹಾರ ಮತ್ತು ಡೀನೋಟಿಫೈ ಆಗಿತ್ತೇ ಎನ್ನುವಂಥ ವಿಚಾರ ಇದೆ. ಆದರೆ ಡಿನೋಟಿಫೈ ಆಗಿಲ್ಲ. ಆ ವಿಚಾರವನ್ನು ಬಿಟ್ಟು ಉಳಿದಿರತಕ್ಕಂಥವುಗಳಿಗೆ ಉತ್ತರವನ್ನು ಕೊಡಲು ಸರ್ಕಾರಕ್ಕೆ ಕಾಲಾವಕಾಶ ಬೇಕು. ಖಂಡಿತವಾಗಿಯೂ ಸರ್ಕಾರ ಉತ್ತರ ಕೊಡುತ್ತದೆ.

ಡಾ: ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಮಾನ್ಯ ಅನ್ನದಾನಿಯವರೆ, ನೀವು ಈಗಾಗಲೇ ಒಂದು ಕ್ಲಾರಿಫಿಕೇಶನ್ ಕೇಳಿದ್ದೀರಿ. ಮಾನ್ಯ ಸಚಿವರು ಹೇಳಿದಂತೆ ಇದರ ಬಗ್ಗೆ ಏನಾದರೂ ಚರ್ಚೆಯಾಗಬೇಕಿದ್ದರೆ ಬೇರೆ ನಿಯಮಾವಳಿಗಳಡಿಯಲ್ಲಿ ನೋಟಿಸ್‌ನ್ನು ನನಗೆ ಕಳುಹಿಸಿಕೊಡಿ. ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಉದಾಸಿಯವರು ತಮ್ಮ ವಿಷಯವನ್ನು ಸದನದಲ್ಲಿ ಗಮನ ಸೆಳೆಯಿರಿ.

(ಆ) 2000-01ನೇ ಸಾಲಿನಲ್ಲಿ ಹುಡ್ಕೋದಿಂದ ಸಾಲ ಪಡೆದು ರಾಜ್ಯದ ಪಟ್ಟಣ ಮತ್ತು ನಗರಗಳಲ್ಲಿ ಕಾಮಗಾರಿಗಳಾಗದೆ ಭ್ರಷ್ಟಾಚಾರ ನಡೆದಿರುವುದು

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೆ, 2000-01ನೇ ಸಾಲಿನಲ್ಲಿ ಹುಡ್ಕೋದಿಂದ ಸಾಲ ಪಡೆದು ರಾಜ್ಯದ ಪಟ್ಟಣ ಮತ್ತು ನಗರಗಳಲ್ಲಿ ಕಾಮಗಾರಿಗಳಾಗದೆ ಭ್ರಷ್ಟಾಚಾರ ನಡೆದಿರುವ ಬಗ್ಗೆ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) : ಮಾನ್ಯ ಅಧ್ಯಕ್ಷರೆ, 2000-01ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಹುಡ್ಕೋ ಯೋಜನೆಯಡಿ ರೂ. 130.00 ಕೋಟಿಗಳ ಸಾಲವನ್ನು ಪಡೆಯಲಾಗಿತ್ತು. ಈ ಕಾರ್ಯಕ್ರಮದ ಅನುಷ್ಠಾನದ ಹೊಣೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಹಿಸಲಾಗಿತ್ತು. ಈ ಕಾಮಗಾರಿಗಳ ಗುತ್ತಿಗೆಯನ್ನು ಮೆ: ಇಂಜಿನಿಯರಿಂಗ್ ಪ್ರಾಜೆಕ್ಟ್ಸ ಇಂಡಿಯಾ ಲಿಮಿಟೆಡ್ ಮತ್ತು ಮೆ: ಚಂದ್ರಗಿರಿ ಕನ್ಸ್ಟ್ರಕ್ಷನ್ಸ್‌ರವರಿಗೆ ವಹಿಸಲಾಗಿತ್ತು. ಸದರಿ ಕಾಮಗಾರಿಗಳಲ್ಲಿ ಸ್ಥಳಪರಿಶೀಲನೆ ಕೈಗೊಂಡಾಗ ಕಂಡುಬಂದ ಕಾರಣಗಳಿಗಾಗಿ ಈ ಬಗ್ಗೆ ಸಂಬಂಧಪಟ್ಟಿರುವ ಜಿಲ್ಲಾಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು / ಅಭಿಯಂತರರು ಸದರಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ದೃಢೀಕರಿಸಿದ ನಂತರವೇ ಬಿಲ್ಲುಗಳನ್ನು ಪಾವತಿ ಮಾಡಲು

ಸೂಚಿಸಲಾಗಿದೆ. ಕೆಲವು ನಗರ ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳಲ್ಲಿ ಲೋಪದೋಷಗಳು ಕಂಡು ಬಂದಿದ್ದು ಇಂತಹವುಗಳನ್ನು ಗುತ್ತಿಗೆದಾರರ ಖರ್ಚಿನಿಂದಲೇ ಸರಿಪಡಿಸಲು ಸೂಚಿಸಲಾಗಿದೆ. ಇದಲ್ಲದೆ ಈ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಟಾರ್‌ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ ಇವರಿಂದ ವರದಿಯನ್ನು ಪಡೆಯುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಆದೇಶಿಸಿದೆ.

†**ಶ್ರೀ ಸಿ.ಎಂ. ಉದಾಸಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು 130 ಕೋಟಿ ರೂ.ಗಳ ಸಾಲವನ್ನು ಪಡೆಯಲಾಗಿತ್ತು ಎನ್ನುವುದನ್ನು ಹೇಳಿದ್ದಾರೆ. ಈ ಗುತ್ತಿಗೆಯನ್ನು ವಹಿಸಬೇಕಾದಾಗ ಶೇಕಡ 30 ರಷ್ಟು ಅಧೀಕ ಮೊತ್ತಕ್ಕೆ ಗುತ್ತಿಗೆಯನ್ನು ವಹಿಸಲಾಗಿದೆ. ಆದರೆ ಕೆಲಸಗಳು ಪೂರ್ಣವಾಗದೇ ಹಣ ಪಾವತಿಯಾಗಿದೆ. ನನ್ನ ಕ್ಷೇತ್ರವಾದ ಹಾವೇರಿ ಜಿಲ್ಲೆ ಒಂದರ ಬಗ್ಗೆಯೇ ಹೇಳುವುದಾದರೆ ಹಾವೇರಿ ಜಿಲ್ಲೆಯ ಏಳು ನಗರಸಭೆ ಮತ್ತು ಪುರಸಭೆ ಮತ್ತು ಪಟ್ಟಣ ಪಂಚಾಯತಿಯಲ್ಲಿ ಆಗಿರುವಂಥ ಕೆಲಸದಲ್ಲಿ ಶೇಕಡ 25 ರಷ್ಟು ಕೂಡ ಕೆಲಸವಾಗದೇ ಇದ್ದರೂ ಹಣ ಪಾವತಿಯಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಒಂದು ಕಡೆ ಹೇಳುತ್ತಾರೆ ಸರಿಯಾಗದೇ ಲೋಪದೋಷಗಳು ಕಂಡು ಬಂದಿತ್ತು ಎಂದು ಹೇಳುತ್ತಾರೆ. ಆದರೆ ಏನು ಲೋಪದೋಷಗಳು ಎನ್ನುವ ಬಗ್ಗೆ ಇಲ್ಲಿ ವಿವರಗಳನ್ನು ಕೊಡುವುದಕ್ಕೆ ಹೋಗಿಲ್ಲ. ಏನು ಲೋಪದೋಷಗಳು ಕಂಡುಬಂದಿವೆ? ಕೆಲಸ ಇನ್ನೂ ಎಷ್ಟು ಪ್ರಮಾಣದಲ್ಲಿ ಆಗಿಲ್ಲ? ಇವುಗಳ ಬಗ್ಗೆ ಏನೊಂದು ವಿವರವನ್ನು ಅವರು ಕೊಡುವುದಕ್ಕೆ ಹೋಗಿಲ್ಲವಾದ ಕಾರಣವನ್ನು ನೋಡಿದರೆ ಇದರಲ್ಲೇನೋ ಲೋಪದೋಷಗಳನ್ನು ಅಧಿಕಾರಿಗಳು ಮುಚ್ಚಿ ಹಾಕುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದಾರೇನೋ ಎನ್ನುವ ಅನುಮಾನಗಳು ನಮಗೆ ಬರುತ್ತಿವೆ. ಇದರಲ್ಲಿ ಇನ್ನೊಂದು ವಿಚಾರವೆಂದರೆ ನಮ್ಮಲ್ಲಿ 36 ಲಕ್ಷ ರೂಪಾಯಿಗಳ ಕೆಲಸವಾಗಿದೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಆದರೆ ಅಲ್ಲಿ ಕೇವಲ 6 ಲಕ್ಷ ರೂಪಾಯಿಗಳ ಕೆಲಸವಾಗಿದೆ. 50 ಲಕ್ಷ ರೂಪಾಯಿಗಳಿಗೆ ಶೇಕಡ 30ರಷ್ಟು ಹೆಚ್ಚಿನ ಮೊತ್ತಕ್ಕೆ ಇಲ್ಲಿ ಗುತ್ತಿಗೆ ಕೊಟ್ಟು ಒಟ್ಟು 65 ಲಕ್ಷ ರೂಪಾಯಿಗಳಿಗೆ ಕೇವಲ ಹಾನಗಲ್ ಪುರಸಭೆಯೊಂದರಲ್ಲಿಯೇ ಈ ರೀತಿಯಾಗಿರುವಾಗ ಇನ್ನು ಇಡೀ ರಾಜ್ಯಾದ್ಯಂತ ಆಗಿರುವಂಥ ಅನಾಹುತ ಬಹಳ ದೊಡ್ಡದಿದೆ. ಆದಕಾರಣ ಇದರ ಬಗ್ಗೆ ವಿಚಾರಣೆಯನ್ನು ಪ್ರತ್ಯೇಕ ಬೇರೆ ಇಲಾಖೆಯ ಕಡೆಯಿಂದ ಮಾಡಿಸಲು ಏನಾದರೂ ಕ್ರಮ ಕೈಗೊಳ್ಳುವರೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾದಂತೆ ನಾನೊಂದು ವಿಚಾರ ಹೇಳಬಯಸುತ್ತೇನೆ. ಒಟ್ಟು 100 ನಗರಸಭೆ ಮತ್ತು ಪುರಸಭೆಗಳ ಸಮಸ್ಯೆ ಇದಾಗಿದೆ. ಇದರಲ್ಲಿ 100 ಕೋಟಿ ರೂಪಾಯಿ ಇಟ್ಟಿದ್ದರು. ಇನ್ನು 30 ಕೋಟಿ ರೂಪಾಯಿಗಳನ್ನು ಪಡೆದು ಒಟ್ಟಾರೆ 130 ಕೋಟಿ ರೂಪಾಯಿಗಳಲ್ಲಿ ಕೆಲಸ ಮಾಡಿಸಲು ರಾಜ್ಯ ಸರ್ಕಾರ ವ್ಯವಸ್ಥೆ ರೂಪಿಸಿತು. ಈ ಹುಡ್ಕೋ ಸಾಲ ಎಲ್ಲಾ 100 ನಗರಸಭೆಗಳಿಗೆ ಸಾಲವಾಗಿ ಬಿತ್ತು. ಆದರೆ ರಸ್ತೆ ಕೆಲಸವಾಗಲಿಲ್ಲ. ನಮಗೆ ಸುದ್ದಿ ಬಂತು. ರಸ್ತೆಗಳೇ ಆಗದಿದ್ದರೂ ಪರವಾಗಿರಲಿಲ್ಲ. ಇದರಿಂದ ಸಾಲ ಕೂಡ ನಗರಸಭೆಗೆ ಬರುತ್ತಿರಲಿಲ್ಲ. ಆದರೆ ಈಗೇನಾಗಿದೆಯೆಂದರೆ ಒಂದೊಂದು ನಗರಸಭೆಗೂ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಸಾಲ ಮೈಮೇಲೆ ಬೀಳುತ್ತಿದೆ. ಕೇವಲ ಶಿವಮೊಗ್ಗ ನಗರಸಭೆಯೊಂದರಲ್ಲೇ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳಲ್ಲಿ ಐದು ರಸ್ತೆಗಳು

ಆಗಬೇಕಾಗಿತ್ತು. ಇದರಲ್ಲಿ ಮೂರು ರಸ್ತೆಗಳನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಆ ಮೂರು ರಸ್ತೆಗಳು ಕಳಪೆ ಗುಣಮಟ್ಟದ್ದಾಗಿವೆ. ಈ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗೆ ಈಗಾಗಲೇ ಇವರು 67.5 ಲಕ್ಷ ರೂಪಾಯಿಗಳ ಪೇಮೆಂಟ್ ಮಾಡಿಬಿಟ್ಟಿದ್ದಾರೆ. ಸರ್ಕಾರವೇ ಕಳಪೆ ಕೆಲಸವಾಗಿದೆ ಎಂದು ಒಪ್ಪಿಕೊಂಡಿದೆ. ಆದರೆ ಈಗಾಗಲೇ 67.5 ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ. ಆದುದರಿಂದ ಇಂಥ ಕಳಪೆ ಕೆಲಸ ಮಾಡಿಸಿದ ಕಂಟ್ರ್ಯಾಕ್ಟರ್‌ನ್ನು ಬ್ಲ್ಯಾಕ್ ಲಿಸ್ಟ್‌ನಲ್ಲಿಟ್ಟಿದ್ದೀರಾ? ಇನ್ನು ಯಾವಾಗ ಈ ಕೆಲಸವನ್ನು ಪೂರ್ಣ ಮಾಡುತ್ತೀರಿ? ಏಕೆಂದರೆ ತಕ್ಷಣವೇ ಈ ಕೆಲಸವನ್ನು ಪ್ರಾರಂಭ ಮಾಡಬೇಕು. ತಕ್ಷಣ ಪ್ರಾರಂಭ ಮಾಡಿದ ಮೇಲೆ ಯಾವಾಗ ಕೆಲಸವನ್ನು ಪೂರ್ಣಗೊಳಿಸುತ್ತೀರಿ ಎಂಬ ಬಗ್ಗೆ ಹೇಳಬೇಕು. ಏಕೆಂದರೆ ಈಗಾಗಲೇ ನಗರಸಭೆಗಳಿಗೆ ಸಾಲವನ್ನು ಹೊರಿಸಿಯಾಗಿದೆ. ಬಡ್ಡಿ ಮೈ ಮೇಲೆ ಬೀಳುತ್ತಿದೆ. ಕೆಲಸವಾಗಿಲ್ಲ. ಇಡೀ ಊರಿನಲ್ಲಿ ಇಡೀ ರಾಜ್ಯದ 100 ನಗರಸಭೆಗಳಲ್ಲಿ ರಸ್ತೆಗಳು ಗುಂಡಿಗಳಾಗಿವೆ. ಅವುಗಳು ಏನೂ ಕೆಲಸ ಮಾಡುವ ಸ್ಥಿತಿಯಲ್ಲಿ ಇಂದು ಇಲ್ಲವಾಗಿದೆ. ಆದಕಾರಣ ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಪೂರ್ಣ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಇದರ ಜೊತೆಗೆ ಸಂಬಂಧಪಟ್ಟ ಕಂಟ್ರಾಕ್ಟರ್ ಮೇಲೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಕೆಲವು ಸ್ಥಳಗಳಲ್ಲಿ ಕೆಲಸ ಸರಿಯಾಗಿ ಆಗಿಲ್ಲ ಮತ್ತು ಪೂರ್ಣ ಕೂಡ ಆಗಿಲ್ಲ. ಅದೇ ರೀತಿ ಮಾನ್ಯ ಉದಾಸಿಯವರ ಕ್ಷೇತ್ರದಲ್ಲಿ ಕೇವಲ 10 ಲಕ್ಷ ರೂಪಾಯಿಗಳ ಕೆಲಸ ಮಾತ್ರ ಮಾಡಿ ಬಾಕಿ ಕೆಲಸವನ್ನು ಹಾಗೆಯೇ ಅವರು ಬಿಟ್ಟುಬಿಟ್ಟಿದ್ದಾರೆ. ಆದುದರಿಂದ ಆ ಕೆಲಸವನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ನಾನು ಕೆ.ಯು.ಐ.ಡಿ.ಎಫ್.ಸಿ. ಯವರಿಗೆ ತಿಳಿಸುತ್ತೇನೆ. ಹಾವೇರಿ ಪಟ್ಟಣದಲ್ಲೂ ಕೂಡ ನಾವು ಇನ್ನು ಕಂಟ್ರ್ಯಾಕ್ಟ್‌ದಾರರಿಗೆ ಹಣವನ್ನು ಪೂರ್ತಿ ಪಾವತಿ ಮಾಡಿಲ್ಲ. ಈ 130 ಕೋಟಿ ರೂಪಾಯಿಗಳೇನಿತ್ತು ಇದರಲ್ಲಿ ಒಟ್ಟು 191 ಪುರಸಭೆಗಳಲ್ಲಿ ನಾವು ಕೆಲಸಗಳನ್ನು ತೆಗೆದು ಕೊಂಡಿದ್ದೇವೆ. ಯಾವ ಕೆಲಸಗಳು ಎಲ್ಲಿ ಕಳಪೆಯಾಗಿದೆಯೋ ಅದಕ್ಕೆ ಸಂಬಂಧಪಟ್ಟಂತೆ ನಾವು ಹಣ ಪಾವತಿ ಮಾಡಿಲ್ಲ. ಈ ಸಂಬಂಧ ಕಾಮಗಾರಿ ಕೆಲಸಗಳ ನಡೆದಿರುವ ಬಗ್ಗೆ ಮೆ.ಟಾರ್ ಸ್ಟೀಲ್ ಆಫ್ ಇಂಡಿಯಾದವರಿಗೆ ವರದಿ ಕಳುಹಿಸಲು ಸೂಚಿಸಿದ್ದೇವೆ. ಇವರ ವರದಿ ಬಂದಮೇಲೆ ನಾವು ಹಣವನ್ನು ಕೊಡುತ್ತೇವೆ. ಅಲ್ಲಿಯವರೆವಿಗೂ ನಾವು ಕಂಟ್ರ್ಯಾಕ್ಟರ್‌ಗಳಿಗೆ ಹಣವನ್ನು ಪಾವತಿ ಮಾಡುವುದಿಲ್ಲ. ಈಗ ಇನ್ನೂ ಎರಡ್ಮೂರು ತಿಂಗಳು ಮಳೆಗಾಲವಿರುತ್ತದೆ. ಆದಕಾರಣ ಈ ಮಳೆಗಾಲ ಮುಗಿದ ಮೇಲೆ ಹಾನಗಲ್‌ನಲ್ಲಿ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಇದಷ್ಟೇ ಅಲ್ಲದೇ ಎಲ್ಲೆಲ್ಲಿ ಕೆಲಸ ಪೂರ್ಣವಾಗಿಲ್ಲವೋ ಅವುಗಳ ಬಗ್ಗೆ ವರದಿ ತರಿಸುತ್ತೇನೆ. ಅಲ್ಲೂ ಕೂಡ ಮಳೆಗಾಲ ಮುಗಿದಮೇಲೆ ಸಂಪೂರ್ಣವಾಗಿ ಕೆಲಸ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯಾದ್ಯಂತ ಇವರು ಏನು ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಅದರ ವಿವರವನ್ನು ಕೊಡಬೇಕಾಗಿತ್ತು. ಇದರಜೊತೆಗೆ ಇದಕ್ಕೆ ಎಷ್ಟು ಹಣ ಪಾವತಿಯಾಗಿದೆ ಮತ್ತು ಎಷ್ಟು ಕೆಲಸವಾಗಿದೆ ಎನ್ನುವುದರ ಬಗ್ಗೆ ವಿವರವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಇಲ್ಲಿಯವರೆಗೆ ಮಾನ್ಯ ಸಚಿವರು ಈ ಬಗ್ಗೆ ವಿವರವನ್ನು ಕೊಟ್ಟಿಲ್ಲ. ಆದಕಾರಣ ಆ ವಿವರವನ್ನು ಕೊಡುವ ಕೆಲಸವನ್ನು ಮಾಡಬೇಕೆಂದು ವಿನಂತಿ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಉದಾಸಿಯವರು ನಿಯಮ 73ರ ಅಡಿಯಲ್ಲಿ ಈ ವಿವರವನ್ನು ಮೊದಲೇ ಕೇಳಿದ್ದರೆ ನಾನು ವಿಚಾರ ಒದಗಿಸುತ್ತಿದ್ದೆ. ಆದರೂ ಕೂಡ ನಾನು ಮಾನ್ಯ ಉದಾಸಿಯವರಿಗೆ ಪ್ರತ್ಯೇಕವಾಗಿಯೇ ಎಷ್ಟೆಷ್ಟು ಕೆಲಸವಾಗಿದೆ ಎಂಬ ಬಗ್ಗೆ ವಿವರವಾಗಿ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಬಂದಿರುವುದೇನೆಂದರೆ ಈಗಾಗಲೇ ಒಂದೊಂದು ನಗರಸಭೆಗೂ ಒಂದೂ ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಸಾಲದ ಹೊರೆ ಬಿದ್ದಿದೆ. ಈಗೇನಾಗಿದೆಯೆಂದರೆ 100 ನಗರಸಭೆಗಳಲ್ಲಿ ಇದನ್ನು ಸೂಪರ್‌ವೈಸ್ ಮಾಡುವಂಥ ಅಧಿಕಾರ ಕೂಡ ನಗರಸಭೆ ಮತ್ತು ಪುರಸಭೆಯವರಿಗಿಲ್ಲವಾಗಿದೆ. ತಾವು ಇದನ್ನು ಗಮನಿಸಬೇಕು. ಸೂಪರ್‌ವೈಸ್ ಮಾಡುವಂಥ ಅವಕಾಶ ಕೂಡ ನಮಗಿಲ್ಲ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಯಾರು ಆ ಕಂಟ್ರ್ಯಾಕ್ಟರ್ ಇದ್ದಾರೆ ಅವರನ್ನು ಬ್ಲ್ಯಾಕ್ ಲಿಸ್ಟ್‌ನಲ್ಲಿಟ್ಟು ಬೇರೆಯವರ ಹತ್ತಿರ ಈ ಕೆಲಸವನ್ನು ಮಾಡಿಸುತ್ತೀರೋ ಅಥವಾ ಅವನ ಹತ್ತಿರವೇ ಈ ಕೆಲಸ ಮಾಡಿಸುತ್ತೀರೋ?

ಈ ಸಮಸ್ಯೆ ಏನಿದೆ, ಇದನ್ನು ಸೂಪರ್‌ವೈಸ್ ಮಾಡುವುದಕ್ಕೆ ಚೆಕ್ ಪೇಮೆಂಟ್ ಮಾಡುವಂತಹ ಸಂದರ್ಭದಲ್ಲಿ ನಗರಸಭೆ ಮತ್ತು ಪುರಸಭೆಗಳನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಯಾರಿಂದ ಒಳ್ಳೆಯ ಕೆಲಸವಾಗಿದೆ ಎಂದು ನೋಡಿ ಇನ್ನು ಮುಂದಾದರೂ ಕೂಡ ಅವರನ್ನು ಸೂಪರ್‌ವೈಸ್ ಮಾಡಿದ ನಂತರ ಅವರ ಪೇಮೆಂಟ್ ಮಾಡುವ ದಿಕ್ಕಿನಲ್ಲಿ ಗಮನ ಕೊಡುತ್ತೀರಾ? ಯಾವತ್ತು ಮುಗಿಸುತ್ತೀರಿ ಎನ್ನುವುದು ಎಲ್ಲದ್ದಕ್ಕಿಂತ ಮುಖ್ಯ. ಏಕೆಂದರೆ ಇವತ್ತು ನಾಲ್ಕು ವರ್ಷವಾಯಿತು ಈ ಸಮಸ್ಯೆ ಪ್ರಾರಂಭವಾಗಿದೆ. ನಾಲ್ಕು ವರ್ಷಗಳಿಂದ ಈ ನಗರಸಭೆ ಮತ್ತು ಪುರಸಭೆಗಳ ಮೇಲೆ ಸಾಲ ಹಾಗೂ ಅದಕ್ಕೆ ಬಡ್ಡಿ ಬಿದ್ದಿರುವಂತಹ ಸಂದರ್ಭದಲ್ಲಿ ರಸ್ತೆ ಕೆಲಸವಾಗಿಲ್ಲ. ಸುಮ್ಮನೆ ಇದ್ದಿದ್ದರೆ ನಮ್ಮ ಮೇಲೆ ಸಾಲನೂ ಬೀಳುತ್ತಿರಲಿಲ್ಲ. ಈಗ ನಮಗೆ ಸಾಲನೂ ಕೊಟ್ಟು ರಸ್ತೆನೂ ಇಲ್ಲದೆ ಇರುವಂತಹ ಪರಿಸ್ಥಿತಿ ಮಾಡಿದಂತಹ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಈ ಮೂರು ನಾಲ್ಕು ಪ್ರಶ್ನೆಗೆ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್ ಅವರೇ, ತಮಗೆ ಅವಕಾಶ ಇಲ್ಲ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಈಗ ನೀವು ಹೇಳಿದಂತೆ 130 ಕೋಟಿ ರೂಪಾಯಿ ಸಾಲ ಬಿದ್ದಿದೆ. ಆದರೆ ಸ್ಥಳೀಯ ಸಂಸ್ಥೆಗೆ ಎಂಜಿನಿಯರ್ ಕಮಿಷನರ್ ಮತ್ತು ಅಲ್ಲಿರತಕ್ಕಂಥ ಅಧಿಕಾರಿಗಳೂ ಕೂಡ ಕ್ವಾಲಿಟಿ ಸರಿಯಿದೆಯೋ ಇಲ್ಲವೋ ಎನ್ನುವ ಅಭಿಪ್ರಾಯ ಅವರಿಂದ ಬಂದಮೇಲೆ, ನಾವು ಅದನ್ನು ಚೆಕ್ ಪೇಮೆಂಟ್ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೆ ನಾನು ಹೇಳುತ್ತಿರುವುದು....

ಅಧ್ಯಕ್ಷರು : ತಾವು ಎಷ್ಟು ಸಾರಿ ಪ್ರಸ್ತಾಪ ಮಾಡುವುದು? ಮಾನ್ಯ ಈಶ್ವರಪ್ಪನವರೇ, ತಾವು ಹಿರಿಯ ಸದಸ್ಯರಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಬೇಡ ಎಂದರೆ ಬಿಟ್ಟುಬಿಡುತ್ತೇನೆ ಅಷ್ಟೆ.

ಅಧ್ಯಕ್ಷರು : ಬೇಡ ಎನ್ನುವ ಪ್ರಶ್ನೆ ಅಲ್ಲ. ನಿಮ್ಮ ಸಮಸ್ಯೆಗಳಿಗೆ ನೀವು ಮಾತನಾಡ ಬೇಕಾಗುತ್ತದೆ. ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ. ಎರಡು ಕ್ಲಾರಿಫಿಕೇಷನ್ ಕೇಳಿದ್ದೀರಿ. ಮತ್ತೆ ಮತ್ತೆ ಕೇಳಿದರೆ ಹೇಗೆ? ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆವರೆಗೆ ಮುಂದೂಡುತ್ತಿದ್ದೇನೆ.